ಇ) ಬೆಂಗಳೂರಿನಲ್ಲಿ 4 ಸಂಚಾರಿ ನೇತ್ರ ಆಸ್ಪತ್ರೆಗಳಿವೆ. (1 ಆಸ್ಪತ್ರೆ ಸರ್ಕಾರವೂ ಹಾಗೂ ಉಳಿದ 3 ಆಸ್ಪತ್ರೆಗಳು ಖಾಸಗಿಯವರಿಂದ ಕಾರ್ಯ ನಿರ್ವಹಿಸುತ್ತಿವೆ)

ಈ) ಹೌದು. ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಸಂಚಾರಿ ನೇತ್ರ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.

ಉ) ಅನ್ವಯಿಸುವುದಿಲ್ಲ.

ಅಕ್ಕಿತಿಮ್ಮನ ಹಳ್ಳಿಯ ಕ್ರೀಡಾಂಗಣ ನಿರ್ಮಾಣದ ಹಂತದಲ್ಲಿ ಕುಸಿದ ಬಗ್ಗೆ

2251 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ಕಿ ತಿಮ್ಮನಹಳ್ಳಿಯ ಬಳಿ ನಿರ್ಮಿಸುತ್ತಿರುವ ಕ್ರೀಡಾಂಗಣ ಇತ್ತೀಚಿನ ಮಳೆಗೆ ಕುಸಿದು ಬಿದ್ದಿದ್ದು ನಿಜವಲ್ಲವೇ?

ಆ) ಇದರಿಂದ ಎಷ್ಟು ಜನರು ಮೃತಪಟ್ಟರು?

ಇ) ಇದಕ್ಕೆ ಕಾರಣಗಳೇನು?

ಈ) ಈ ಕ್ರೀಡಾಂಗಣದ ಕೆಲಸ ಕಳಪೆಯಾಗಿರುವುದು ಕುಸಿತಕ್ಕೆ ಕಾರಣವೇ?

ಉ) ಈ ಕ್ರೀಡಾಂಗಣದ ನಿರ್ಮಾಣ ಕಾರ್ಯ ಇದರಿಂದ ಕುಂಠಿತಗೊಳ್ಳವುದಿಲ್ಲವೇ?

ಊ) ಈ ಉದ್ದೇಶಿತ ಕ್ರೀಡಾಂಗಣ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಅಜಯ ಕುಮಾರ್ ಸರನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

ಅ) 26.8.95ರಂದು ಕ್ರೀಡಾಂಗಣದ ಕಾರು ನಿಲುಗಡೆಯ ಮೇಲ್ಛಾವಣಿಗೆ ಕಾಂಕ್ರೀಟನ್ನು ಹಾಕಲು ಸಿದ್ದಪಿಡಸಿದ್ದ ಆಧಾರ ಸ್ಥಂಭಗಳು ಕುಸಿದು ಬಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಒಬ್ಬರು ಮೃತಪಟ್ಟಿರುತ್ತಾರೆ.

ಇ) ಸ್ಕಾಫೋಲ್ಡಿಂಗ್ ದೋಷದಿಂದ ಈ ಅಪಘಾತವು ಸಂಭವಿಸಿರುತ್ತದೆ.

ಈ) ಇಲ್ಲ.

ಉ) ಇಲ್ಲ.

ಊ) 1995ರ ಡಿಸೆಂಬರ್ ಮಾಹೆಯ ಅಂತ್ಯದೊಳಗೆ.

ಅರಣ್ಯ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡದೆ ಇರುವ ಬಗ್ಗೆ.

2252 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅರಣ್ಯ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಹುದ್ದೆ ನೀಡಲು ಬಂದಿರತಕ್ಕ ಅರ್ಜಿಗಳ ಸಂಖ್ಯೆ ಎಷ್ಟು?*

ಆ) *ಈ ಇಲಾಖೆಯಲ್ಲಿ ಜನವರಿ 1995 ರಿಂದ ಅನುಕಂಪದ ಆಧಾರದ ಮೇಲೆ ನೀಡಿರುವ ಹುದ್ದೆಗಳೆಷ್ಟು?*

ಇ) *ಅನುಕಂಪದ ಹುದ್ದೆಗಳನ್ನು 3 ತಿಂಗಳಲ್ಲಿ ಭರ್ತಿ ಮಾಡಬೇಕೆಂದು ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೇ?*

ಈ) *ಈ ಇಲಾಖೆಯಲ್ಲಿ ಬಂದಿರತಕ್ಕ ಎಲ್ಲಾ ಅರ್ಜಿಗಳಿಗೆ ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು.*

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು)

ಅ) ಈ ಕಛೇರಿಯಲ್ಲಿ ದಿನಾಂಕ 13.9.95ರಂತೆ ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ 42 ಅರ್ಜಿಗಳು ಬಂದಿದೆ.

ಆ) ಈ ಇಲಾಖೆಯಲ್ಲಿ ಜನವರಿ 95 ರಿಂದ ಅನುಕಂಪದ ಆಧಾರದ ಮೇಲೆ ಯಾರಿಗೂ ಉದ್ಯೋಗ ನೀಡಿರುವುದಿಲ್ಲ.

ಇ) ಹೌದು, ಜ್ಞಾಪನಾ ಪತ್ರ ಸಂಖ್ಯೆ: ಡಿಪಿಎಆರ್ 20 ಎಸಸಿಎ 98, ದಿನಾಂಕ 2.9.1993ರ ಪ್ರಕಾರ ಅನುಕಂಪದ ಆಧಾರದ ಮೇಲೆ ಉದ್ಯೋಗವನ್ನು 3 ತಿಂಗಳೊಳಗೆ ನೀಡಲು ಆದೇಶವಿದೆ.

ಈ) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 3363: 1993ರಲ್ಲಿ ಅರ್ಜಿ ಸಂಖ್ಯೆ: 690:92ರ ಅರ್ಜಿಯಲ್ಲಿ ನೀಡಿರುವ ತೀರ್ಪನ್ನು ಉಲ್ಲೇಖಿಸುತ್ತಾ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಸರ್ಕಾರವು ಆದೇಶ ಸಂಖ್ಯೆ: ಡಿಪಿಎಆರ್ 30 ಎಸಎಸಆರ್ 84, ದಿನಾಂಕ 22.8.1985ರಲ್ಲಿ ಹೊರಡಿಸಿದ ತಿದ್ದುಪಡಿಯ ಆದೇಶಗಳನ್ನು ರದ್ದುಗೊಳಿಸಿದೆ. ಮೇಲೆ ಹೇಳಿದ ಪ್ರಕರಣದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಪ್ರತಿವಾದಿಗಳಾಗಿರುವುದರಿಂದ, ಮತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ಅವಕಾಶ ಕಲ್ಪಿಸಿದ್ದ ಸರ್ಕಾರದ ಆದೇಶವನ್ನು ರದ್ದುಪಡಿಸಿರುವುದರಿಂದ, ಅನುಕಂಪದ ಆಧಾರದ ಉದ್ಯೋಗ ನೀಡಿದಲ್ಲಿ ನ್ಯಾಯಾಲಯದ ಆದೇಶದ ನಿಂದನೆಯಾಗುವುದರಿಂದ ಈ ವಿಷಯದಲ್ಲಿ ಅಂತಿಮವಾಗಿ ಸರ್ಕಾರದ ಮಟ್ಟದಲ್ಲಿ ಇತ್ಯರ್ಥವಾದನಂತರ ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು.

ರಾಜ್ಯದ ಖಾಸಗಿ ಅನುದಾನಿತ ಜಿಲ್ಲಾವಾರು ಪ್ರೌಢಶಾಲೆಗಳು (ಸಂಯುಕ್ತ ಪದವಿ ಪೂರ್ವ ಕಾಲೇಜುಗಳು) ಸೇರಿದಂತೆ ಪಟ್ಟಿ.

1.	ಬೆಂಗಳೂರು ಉತ್ತರ	-	110
2.	ಬೆಂಗಳೂರು ದಕ್ಷಿಣ	-	121
3.	ಬೆಂಗಳೂರು ಗ್ರಾಮಾಂತರ	-	87
4.	ತುಮಕೂರು	-	225
5.	ಕೋಲಾರ	-	64
6.	ಚಿತ್ರದುರ್ಗ	-	203
7.	ಶಿವಮೊಗ್ಗ	-	112
8.	ಮೈಸೂರು	-	109
9.	ಮಂಡ್ಯ	-	60
10.	ಕೊಡಗು	-	46
11.	ಚಿಕ್ಕಮಗಳೂರು	-	78
12.	ದಕ್ಷಿಣ ಕನ್ನಡ	-	167
13.	ಹಾಸನ	-	89
14.	ಬೆಳಗಾಂ	-	250
15.	ಕಾರವಾರ	-	121
16.	ಧಾರವಾಡ	-	258
17.	ಬಿಜಾಪುರ	-	217
18.	ಗುಲ್ಬರ್ಗಾ	-	50
19.	ರಾಯಚೂರು	-	35
20.	ಬಳ್ಳಾರಿ	-	70
21.	ಬೀದರ್	-	66
	ಒಟ್ಟು		**2538**

ಅನುದಾನಕ್ಕೆ ಒಳಪಡಬೇಕಾದ ಖಾಸಗಿ ಶಾಲೆಗಳ ಜಿಲ್ಲಾವಾರು ವಿವರ

ಸಂಖ್ಯೆ	ಜಿಲ್ಲೆಗಳ ವಿವರ	84-85ರ ಪ್ರಾರಂಭ (91-92ರ ಅರ್ಹತೆ)	85-86ರ ಪ್ರಾರಂಭ 92-93ರ ಅರ್ಹತೆ)	86-87ರ ಪ್ರಾರಂಭ 94-94ರ (ಅರ್ಹತೆ)	ಒಟ್ಟು
1.	ಬೆಂಗಳೂರು ಗ್ರಾಮಾಂತರ	2	9	-	11
2.	ಚಿತ್ರದುರ್ಗ	2	6	-	08
3.	ಕೋಲಾರ	-	2	3	05
4.	ಶಿವಮೊಗ್ಗ	-	1	1	02
5.	ತುಮಕೂರು	8	8	4	20
6.	ಮೈಸೂರು	2	7	1	10
7.	ಚಿಕ್ಕಮಗಳೂರು	2	7	1	10
8.	ದಕ್ಷಿಣ ಕನ್ನಡ	-	-	-	-
9.	ಹಾಸನ	6	10	-	16
10.	ಕೊಡಗು	-	-	1	01
11.	ಮಂಡ್ಯ	-	2	1	03
12.	ಬೆಳಗಾಂ	9	8	-	17
13.	ಬಿಜಾಪುರ	5	12	-	17
14.	ಗುಲ್ಬರ್ಗಾ	3	5	2	10
15.	ಬಳ್ಳಾರಿ	-	-	-	-
16.	ಬೀದರ್	-	1	2	03
17.	ರಾಯಚೂರು	2	5	-	07
18.	ಬೆಂಗಳೂರು ದಕ್ಷಿಣ	3	6	-	09
19.	ಉತ್ತರ ಕನ್ನಡ	-	-	-	-
20.	ಧಾರವಾಡ	6	7	3	16
21.	ಬೆಂಗಳೂರು ಉತ್ತರ	-	3	1	04
	ಒಟ್ಟು	**50**	**99**	**20**	**169**